

ವ್ಯಾಸರ ಸಂಪಾದಕತ್ವದಲ್ಲಿ 'ಅಜಂತಾ' ಪತ್ರಿಕೆ ಸ್ವಲ್ಪ ಕಾಲ ನಡೆಯಿತು. ಅದರಲ್ಲಿ ಸೃಜನಶೀಲ ಬರಹಗಳೊಂದಿಗೆ ಈ ಹೋರಾಟದ ಧ್ವನಿಗಳು ಅನುರಣನಗೊಳ್ಳುತ್ತಿದ್ದವು. ಆಗ ವಿದ್ಯಾರ್ಥಿಯಾಗಿದ್ದ ಕೆ.ಟಿ. ಗಟ್ಟಿಯವರು ನೇತಾರರಾಗಿ ಅಲ್ಲದಿದ್ದರೂ ಸಭೆಸಮಾರಂಭಗಳಲ್ಲಿ ಭಾಗವಹಿಸಿ ಹೋರಾಟದ ಗತಿಯೊಂದಿಗೆ ಗುರುತಿಸಿಕೊಂಡವರಾಗಿದ್ದರು. ಬಡತನದ ಹಿನ್ನೆಲೆಯಲ್ಲಿ ಬದುಕನ್ನು ಕಟ್ಟಿಕೊಳ್ಳುವ ಸವಾಲು ಕೂಡ ಮಿಗಿಲಾಗಿತ್ತು.

ಹಾಗೆ ನೋಡಿದರೆ ಕಾಸರಗೋಡಿನ ಈ ಬರಹಗಾರರೆಲ್ಲ ಕನ್ನಡದಲ್ಲಿ ಸತ್ವಯುತವಾಗಿ ಬರೆಯುತ್ತಿದ್ದುದು, ಈ ಮಣ್ಣಿನ ಕನ್ನಡತನಕ್ಕೆ ಸಾಕ್ಷಿ ನೀಡುವ ಪ್ರತಿಭಟನೆಯ ಹೆಜ್ಜೆಗಳೂ ಆಗಿದ್ದವು ಎಂದು ಈಗ ನನಗನಿಸುತ್ತದೆ. ನವಮಾಧ್ಯಮಗಳನ್ನು ತಮ್ಮ ಪ್ರಚಾರಕ್ಕಾಗಿ ಆಶ್ರಯಿಸದ ಈ ಅಕ್ಕರಿಗರು ಅಕ್ಷರದ ಪ್ರೀತಿಯನ್ನು ಅದರ ಮೂಲಕ ಪಡೆಯುವ ಜ್ಞಾನದ ಬೆಳಕನ್ನು ಮಾತ್ರ ಕೊನೆಯವರೆಗೂ ನೆಚ್ಚಿನಡೆದವರು. ಗಟ್ಟಿಯವರ ಬಗ್ಗೆ ಬರೆಯುವಾಗ ಅವರನ್ನು ಕಾಸರಗೋಡಿಗೆ ಸೀಮಿತಗೊಳಿಸಿ ಬರೆಯಬೇಕಾಗಿಲ್ಲ ಎನ್ನುವುದು ನನಗೆ ಗೊತ್ತು. ಅವರು ಕನ್ನಡ ಲೋಕದ ಪ್ರಜ್ಞೆಯಲ್ಲಿ ಸೇರಿಕೊಂಡವರು. ಆದರೆ ನನಗೆ ಅವರು ಮೊದಲು ಕಾಣಿಸುವುದು ಕಾಸರಗೋಡಿನ ಕೂಡ್ಲು ತಿಮ್ಮಪ್ಪ ಗಟ್ಟಿಯವರಾಗಿ.

ಸಿರಿವಂತರಲ್ಲದಿದ್ದರೂ ಕೃಷಿ ಕೆಲಸಗಳೊಂದಿಗೆ ಕಾವ್ಯ-ಹಾಡು ಮತ್ತು ಸ್ವತಃ ಕಲಾವಿದರಾಗಿ ಯಕ್ಷಗಾನದಂತಹ ಕಲೆಗಳ ಮೇಲೆ ಪ್ರೀತಿಯನ್ನು ಬೆಳೆಸಿಕೊಂಡ ತಂದೆ ದೂಮಪ್ಪ ಗಟ್ಟಿ ಮತ್ತು ಜನಪದ ಹಾಡುಗಳನ್ನು ಹಾಡುತ್ತಿದ್ದ ತಾಯಿ ಪರಮೇಶ್ವರಿ – ಈ ಇಬ್ಬರೂ ಮಗನ ಮೇಲೆ ಸಾಹಿತ್ಯಸಂಸ್ಕಾರದ ಬೀಜವನ್ನು ಬಿತ್ತಿದ್ದರು. ಮನೆ ಮಾತು ತುಳುವಾದರೂ ಕಿವಿಗೆ ಬಿದ್ದ ಯಕ್ಷಗಾನ, ಜೈಮಿನಿಭಾರತ, ಕುಮಾರವ್ಯಾಸ ಭಾರತ ತೊರವೆರಾಮಾಯಣ ಕಾವ್ಯಗಳು, ಶಾಲೆಯಲ್ಲಿ ಗುರುಗಳ ಮೂಲಕ ಕಲಿತ ನುಡಿ ಅನ್ಯವೆಂದೆನಿಸದೆ, ಕನ್ನಡಭಾಷೆಯನ್ನು ಅಂತರ್ಗತಗೊಳಿಸಿಕೊಳ್ಳಲು ಸಹಕಾರಿಯಾದವು. ಹಾಗಾಗಿ ಈ ಪರಿಸರದ ಇತಿಹಾಸ ಹಾಗೂ ಸಾಂಸ್ಕೃತಿಕ